

ತಿಕಸೆ ಮೊನಸ್ಟರಿ



ತಿಕಸೆ ಮೊನಸ್ಟರಿಯ ಮೈತ್ರೇಯ ಬುದ್ಧ

ಡಿಸ್ಕಿಟ್ ಮೊನಸ್ಟರಿಯ ಪಕ್ಕದಲ್ಲಿರುವ ಮೈತ್ರೇಯ ಬುದ್ಧ



ಸುಮಾರು 3,600 ಮೀಟರ್ ಎತ್ತರದಲ್ಲಿರುವ ತಿಕಸೆ ಮೊನಸ್ಟರಿ ಲೇಹ್‌ನಿಂದ 19 ಕಿ.ಮೀ. ಪೂರ್ವ ದಿಕ್ಕಿನಲ್ಲಿದೆ. ಇದನ್ನು ಪಲ್ದಾನ್ ಜೆಂಗ್ಪೊ ಮತ್ತು ಆತನ ಗುರು ಶೆರಾಬ್ ಜೆಂಗ್ಪೊ 15ನೆ ಶತಮಾನದಲ್ಲಿ ಕಟ್ಟಿಸಿದರು. 12 ಮಹಡಿಗಳ ಈ ಮೊನಸ್ಟರಿ ಆರೋಹಣಮುಖಿ. ಬುಡದಲ್ಲೇ ಟಿಬೆಟಿನ ರಕ್ಷಣಾ ದೇವತೆಯ ಮೂರ್ತಿಯಿದೆ. ಕೆಂಪು, ಬಿಳಿ, ಕಾವಿ ಬಣ್ಣದ ಮಠದಲ್ಲಿ ಅಂದಾಜು 60 ಬೌದ್ಧ ಸನ್ಯಾಸಿಗಳಿದ್ದಾರೆ. ದುಖಾಂಗ್ ಕರ್ಮೊ ಇಲ್ಲಿನ ಅತೀ ದೊಡ್ಡ ಪ್ರಾರ್ಥನಾ ಸಭಾಂಗಣ. ಶಾಖ್ಯಮುನಿ ಮತ್ತು ಮೈತ್ರೇಯ ಬುದ್ಧನ ಪ್ರತಿಮೆಗಳಿವೆ. ಎರಡು ಮಾಳಿಗೆಯ ಎತ್ತರಕ್ಕೂ ಇರುವ 15 ಮೀಟರ್ ಎತ್ತರದ ಪದ್ಮಾಸನ ಹಾಕಿ ಕುಳಿತಿರುವ ಮೈತ್ರೇಯ ಬುದ್ಧನ ಪ್ರತಿಮೆಯನ್ನು 1970ರಲ್ಲಿ 14ನೇ ದಲೈಲಾಮಾ ಭೇಟಿಯ ನೆನಪಿನಲ್ಲಿ ಸ್ಥಾಪಿಸಲಾಗಿದೆ.

ಬುದ್ಧನ ಮೂರ್ತಿಯಲ್ಲದೆ ವಜ್ರ ಭೈರವ, ಮಹಾಕಾಲ, ಧರ್ಮಕಾಯ ಮೂರ್ತಿ, ಪಲ್ಡಾನ್ ಲ್ಹಾಮೊ, ಚಾಮ್ ಶ್ರಿಂಗ್ ದೇವಿಯ ಮೂರ್ತಿಗಳೂ ಇವೆ. ತಾರಾ ದೇವಿಗೊಂದು ದೇವಾಲಯ. ದೇವಿಯ ಮನಮೋಹಕ 21 ಬಗೆಯ ಮೂರ್ತಿಗಳನ್ನು ಮರ ಮತ್ತು ಗಾಜಿನ ಕಪಾಟಿನಲ್ಲಿ ಕೂಡಿಸಿದ್ದಾರೆ. ತುತ್ತ ತುದಿಯಲ್ಲಿರುವುದೇ ಲಮೊಖಾಂಗ್ ದೇವಾಲಯ. ಇದು ಪುಸ್ತಕ ಭಂಡಾರವೂ ಹೌದು. ಲಾಮ ಅವತಾರ ಪುರುಷನ ವಾಸಸ್ಥಾನವೂ ಆಗಿರುವ ಇಲ್ಲಿಗೆ ಪುರುಷರಿಗೆ ಮಾತ್ರ ಪ್ರವೇಶ.

ಈ ಮೊನಸ್ಟರಿಯ ಪೂರ್ವ ಮತ್ತು ಪಶ್ಚಿಮ ದಿಕ್ಕಿನಲ್ಲಿ ಸಿಂಧೂ ಕಣಿವೆಯ ರಮಣೀಯ ದೃಶ್ಯ ಕಾಣುತ್ತದೆ. ಟಿಬೆಟನ್ ಕ್ಯಾಲೆಂಡರಿನ 12ನೇ ತಿಂಗಳಲ್ಲಿ ನಡೆಯುವ ತಿಕ್ಸೆ ಉತ್ಸವಕ್ಕೆ ಸಹಸ್ರಾರು ಜನರು ಸೇರುತ್ತಾರೆ.

**ಹೆಮೀಸ್ ಮೊನಸ್ಟರಿ (Hemis Monastery):** ಹೆಮೀಸ್ ಲೇಹ್‌ನಿಂದ 45 ಕಿ.ಮೀ ದೂರ, ಸಿಂಧೂ ನದಿಯ ಪಶ್ಚಿಮ ದಂಡೆಯಲ್ಲಿದೆ. 13ನೇ ಶತಮಾನದಲ್ಲಿ ಕಟ್ಟಿದ ಇದನ್ನು 17ನೇ ಶತಮಾನದಲ್ಲಿ ರಾಜ ಸಿಂಗೆ ನಾಂಗ್ಯಾಲ ನವೀಕರಿಸಿದ. ಇದು ಲಡಾಕ್‌ನ ಅತೀ ದೊಡ್ಡ, ಶ್ರೀಮಂತ ಹಾಗೂ ಜನಪ್ರಿಯ ಮೊನಸ್ಟರಿಯೂ ಹೌದು. ದೊಡ್ಡ ಬುದ್ಧ ಮತ್ತು ಗುರು ರಿಂಪೋಚೆಯ ಮೂರ್ತಿಗಳಿಗೆ ಗೌರವಾರ್ಪಣೆ ಸಲ್ಲಿಸಬಹುದು. ಇಲ್ಲಿರುವ